**ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

**ಎಸ್.ಸಿ.ನಂಃ** ೭೧/೨೦೨೪
**ಸಿಡಬ್ಲೂಃ** ೦೧
**ಪಿಡಬ್ಲೂಃ** ೦೧

ಸಾಕ್ಷಿದಾರರ ಹೆಸರು : ಭೀಮರಾಯ ಬಾಸಗಿ

ತಂದೆಯ ಹೆಸರು : ದುಂಡಪ್ಪ

ವಯಸ್ಸು : ೫೮ ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಚಿಕ್ಕಸಿಂದಗಿ.

- - - - -

**ಇಂದು ದಿನಾಂಕ 13.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

೧) ನಾವು ನಮ್ಮ ತಂದೆ ತಾಯಿಗೆ ನಾಲ್ಕು ಜನ ಮಕ್ಕಳಿರುತ್ತೇವೆ. ಅವರೆಂದರೆ ನಾನು, ಮಹಾದೇವಿ, ಸುಭಾಶ್ಚಂದ್ರ ಮತ್ತು ರೇಣುಕಾಬಾಯಿ ಇರುತ್ತೇವೆ. ಮಹಾದೇವಿ ಮತ್ತು ರೇಣುಕಾ ಇವರನ್ನು ಮದುವೆ ಮಾಡಿಕೊಟ್ಟಿರುತ್ತೇವೆ. ಮಹಾದೇವಿಯನ್ನು ಇದ್ದೂರಿನಲ್ಲಿಯೇ ಮದುವೆ ಮಾಡಿಕೊಟ್ಟಿರುತ್ತೇವೆ. ಇನ್ನೊಬ್ಬ ಸಹೋದರಿ ರೇಣುಕಾಳನ್ನು ಬಗಲೂರಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ನನ್ನ ಅಕ್ಕ ಮಹಾದೇವಿಯ ಗಂಡ ತೀರಿಕೊಂಡ ನಂತರ ಅವರಿಗೆ ಮಕ್ಕಳಾಗಿರದೇ ಇದ್ದುದರಿಂದ ನನ್ನ ಮನೆಯಲ್ಲಿ ವಾಸವಾಗಿದ್ದಳು.

**೨)** ನನಗೆ ಒಬ್ಬ ಹೆಣ್ಣುಮಗಳು ಮತ್ತು ನಾಲ್ಕು ಜನ ಗಂಡುಮಕ್ಕಳಿರುತ್ತಾರೆ. ನಾವು ಹೊಲದಲ್ಲಿ ಮನೆಮಾಡಿಕೊಂಡು ನಾನು, ನನ್ನ ಕುಟುಂಬ, ಸುಭಾಶ್ಚಂದ್ರ ಮತ್ತು ಅವರ ಕುಟುಂಬ ಮತ್ತು ಮಹಾದೇವಿ ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆ. ಚಾ.ಸಾ.**೭**

ಶಾರದಾಬಾಯಿ ನನ್ನ ಹೆಂಡತಿ ಇರುತ್ತಾಳೆ. ನನ್ನ ಒಬ್ಬಳೇ ಮಗಳಾದ ಲಕ್ಷ್ಮೀ @ ಗುರುಬಾಯಿ ಇವಳು ಸಾಯುವ ಮೂರು ವರ್ಷದ ಮೊದಲು ಲೋಣಿ ಗ್ರಾಮದ ಆರೋಪಿ ನಂ.೧ ಇವನಿಗೆ ಮದುವೆ ಮಾಡಿಕೊಟ್ಟಿರುತ್ತೇವೆ.

೩) ಎರಡನೇ ಆರೋಪಿಯು ೧ನೇ ಆರೋಪಿಯ ತಾಯಿ ಇರುತ್ತಾಳೆ. ಆರೋಪಿತರ ಮನೆಯಲ್ಲಿ ಆರೋಪಿ ನಂ.೧ ಮತ್ತು ೨, ೧ನೇ ಆರೋಪಿಯ ಅಣ್ಣ ಸಿದ್ರಾಮ ಮತ್ತು ಅವನ ಹೆಂಡತಿ ಶ್ಯೆಲಾ ವಾಸವಾಗಿದ್ದಾರೆ. ನನ್ನ ಮಗಳಿಗೆ ಶ್ರೇಯಾ ಎನ್ನುವ ಒಬ್ಬಳೇ ಹೆಣ್ಣುಮಗಳು ಇರುತ್ತಾಳೆ.

೪) ಮದುವೆಯಾದ ಬಳಿಕ ಒಂದು ವರ್ಷ ಗಂಡ-ಹೆಂಡತಿ ಚೆನ್ನಾಗಿದ್ದರು. ನಂತರ ಆರೋಪಿ ನಂ.೧ ಮತ್ತು ೨ರವರ ನಡುವೆ ಆಸ್ತಿಯ ಪಾಲಿನ ಸಲುವಾಗಿ ನನ್ನ ಮಗಳು ೧ನೇ ಆರೋಪಿಯ ಅಣ್ಣನಿಗೆ ನೌಕರಿ ಇರುವುದರಿಂದ ತನಗೆ ಸರಿಯಾಗಿ ನೋಡಿಕೊಂಡು ಪಾಲು ಕೊಡಿರಿ ಎಂದು ಕೇಳಿರುತ್ತಾಳೆ. ನಂತರ ನಾನು ಊರ ಹಿರಿಯರಿಗೆ ಹೇಳಿ ಪಾಲು ವಾಟನಿ ಮಾಡಿಸಿರುತ್ತೇನೆ. ಪಾಲು ವಾಟನಿಯಾದ ನಂತರ ನಾನು ನನ್ನ ಮಗಳನ್ನು ಊರಿಗೆ ಕರೆದುಕೊಂಡು ಬಂದಿರುತ್ತೇನೆ.

೫) ನಂತರ ೧ನೇ ಆರೋಪಿಯು ನನ್ನ ಮಗಳನ್ನು ವಾಪಸ್ ಕರೆಯಲು ಬಂದಿರುವುದಿಲ್ಲ. ನಂತರ ಜಟ್ಟೆಪ್ಪ ಮತ್ತು ಅವನ ಅಕ್ಕ ಲಕ್ಷ್ಮೀಬಾಯಿ ಬಂದು ನನ್ನ ಮಗಳಿಗೆ ಮನವೊಲಿಸಿ ಕಾರಿನಲ್ಲಿ ಊರಿಗೆ

**ಎಸ್.ಸಿ.ನಂಃ** ೭೧/೨೦೨೪
**ಸಿಡಬ್ಲೂಃ** ೦೧
**ಪಿಡಬ್ಲೂಃ** ೦೧

ಕರೆದುಕೊಂಡು ಹೋಗಿರುತ್ತಾರೆ. ನಂತರ **೭-೮** ದಿನಗಳ ನಂತರ ನನ್ನ ಮಗಳು ಪೋನ ಮಾಡಿ ಕಿರಿಕಿರಿ ಮಾಡುತ್ತಿದ್ದಾರೆ ಅಂತಾ ಹೇಳಿದಳು. ನನ್ನ ಗಂಡ ದಾರು ಕುಡಿದು ಬಂದು ಹೊಡಿಬಡಿ ಮಾಡುತ್ತಿದ್ದಾನೆ ಅಂತಾ ಹೇಳಿದಳು. ನಾನು ಸಂಭಾಳಿಸಿಕೊಂಡು ಹೋಗುವಂತೆ ಹೇಳಿರುತ್ತೇನೆ.

೬) ಇದಾದ **೨-೩** ದಿನಗಳಿಗೆ ದಿನಾಂಕ **೧೬.೦೮.೨೦೨೩** ರಂದು ಸಂಜೆ **೦೬.೦೦** ಘಂಟೆಗೆ ನನ್ನ ಮಗ ಸುರೇಶನ ಪೋನಿಗೆ ಝಳಕಿ ಪೋಲೀಸರು ಪೋನ ಮಾಡಿ ನಿಮ್ಮ ಮಗಳು ಲಕ್ಷ್ಮಿಯ ಕೊಲೆಯಾಗಿದೆ ಎಂದು ಹೇಳಿದರು. ನಂತರ ತೋಟದಲ್ಲಿ ನಮ್ಮ ಅಕ್ಕ ಮಹಾದೇವಿ, ತಮ್ಮ ಸುಭಾಸ ಕೂಡಿದೆವು. ಆಗ ನನ್ನ ಅಕ್ಕ ಮಹಾದೇವಿ "ನಾವು **೦೪.೦೦** ಘಂಟೆಗೆ ಲಕ್ಷ್ಮಿಗೆ ಪೋನ ಹಚ್ಚಿದಾಗ ಆಕೆಯ ಪೋನ ಸ್ವಿಚ್ ಆಫ್ ಬಂದಿರುತ್ತದೆ, ಆ ಸಮಯದಲ್ಲಿ ನಮ್ಮ ಅಕ್ಕಳು ರೇವಣಸಿದ್ದಪ್ಪ ಜತ್ತಿ ಎನ್ನುವವರಿಗೆ ಪೋನ ಮಾಡಿ ಲಕ್ಷ್ಮಿಗೆ ಪೋನ ಕೊಡುವಂತೆ ಕೇಳಿದಾಗ ಆತನು ಪೋನನ್ನು ಲಕ್ಷ್ಮಿಗೆ ಕೊಟ್ಟಿರುತ್ತಾನೆ, ಆಗ ಲಕ್ಷ್ಮಿ ಪೋನಿನಲ್ಲಿ ಮಹಾದೇವಿಗೆ ನನಗೆ ಹೊಡಿಬಡಿ ಮಾಡುತ್ತಿದ್ದಾರೆ, ಎಷ್ಟೋತ್ತಿದ್ದರೂ ಬಂದು ನನ್ನನ್ನು ಕರೆದುಕೊಂಡು ಹೋಗಿರಿ ಎಂದು ಅಂದಳು" ಎಂದು ಹೇಳಿದಳು.

೭) ಅದಕ್ಕೆ ಮಹಾದೇವಿ ಈಗ ಹೊತ್ತು ಮುಳುಗಿರುತ್ತದೆ ನಾಳೆ ಬಂದು ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದಳು. ಆ

ಸಮಯದಲ್ಲಿ ಲಕ್ಷ್ಮೀಯು ಏನೇ ಆದರೆ ಇವತ್ತು ಬರಬೇಕು ಎಂದು ಹೇಳಿದಳು. ಆಗ ಮಹಾದೇವಿ ರೇವಣಸಿದ್ದನಿಗೆ ಇವತ್ತೊಂದು ದಿವಸ ಅವಳನ್ನು ಕಾಪಾಡಿಕೊಳ್ಳಿರಿ ಅಂತಾ ಹೇಳಿದಾಗ ಆತ ಒಪ್ಪಿಕೊಂಡಿರುತ್ತಾನೆ ಅಂತಾ ಹೇಳಿದಳು.

೮) ಈ ವಿಷಯವನ್ನು ಮಹಾದೇವಿ ಹೇಳಿದ ನಂತರ ನಾವು ಮನೆಯವರು ಮತ್ತು ಊರಿನ ಹಿರಿಯರು ವಾಹನದಲ್ಲಿ ಲೋಣಿ ಗ್ರಾಮಕ್ಕೆ ಹೋಗಿರುತ್ತೇವೆ. ನಾವು ಲೋಣಿ ಗ್ರಾಮಕ್ಕೆ ಹೋಗಿ ನೋಡಿದಾಗ ಆರೋಪಿತರ ಮನೆಯಲ್ಲಿ ಪಡಸಾಲೆಯಲ್ಲಿ ನನ್ನ ಮಗಳ ಶವ ಬಿದ್ದಿತ್ತು. ಮೆದುಳು ಹೊರಗೆ ಬಂದಿತ್ತು. ಮನೆಯಲ್ಲಿ ಗಂಡನ ಮನೆಯವರು ಯಾರೂ ಇರಲಿಲ್ಲ. ಆಗ ರಾತ್ರಿ **೧೦.೦೦** ಘಂಟೆಯಾಗಿತ್ತು. ಪೋಲೀಸರು ಫಿರ್ಯಾದಿ ಕೊಡಲಿಕ್ಕೆ ಹೇಳಿದ್ದರಿಂದ ದಿನಾಂಕ **೧೭.೦೮.೨೦೨೩** ರಂದು ಬೆಳಿಗ್ಗೆ **೦೯.೦೦** ಘಂಟೆಗೆ ನನ್ನ ಮಗನ ಕಡೆಯಿಂದ ದೂರು ಬರೆಯಿಸಿ ಓದಿ ಹೇಳಿದ ನಂತರ ಸಹಿ ಮಾಡಿ ಪೋಲೀಸರಿಗೆ ಕೊಟ್ಟಿರುತ್ತೇನೆ.

೯) ನಾನು ಈಗ ದೂರನ್ನು ನೋಡುತ್ತಿದ್ದು, ಅದನ್ನು ಈಗ ನಿ.ಪಿ.೧ ಎಂದು ಗುರುತಿಸಲಾಯಿತು. ಅದರ ಮೇಲೆ ನನ್ನ ಹೆಬ್ಬಟ್ಟಿನ ಗುರುತು ಇರುತ್ತದೆ. ನಂತರ ಬೆಳಿಗ್ಗೆ **೧೧.೦೦** ಘಂಟೆಗೆ ತಹಶೀಲ್ದಾರರು ಬಂದು ಪಂಚನಾಮೆ ಮಾಡಿರುತ್ತಾರೆ. ನಾನು ಈಗ ಶವ ಪಂಚನಾಮೆ ನೋಡುತ್ತಿದ್ದು, ಅದನ್ನು ಈಗ ನಿ.ಪಿ.೨ ಎಂದು ಗುರುತಿಸಲಾಯಿತು. ಅದರ ಮೇಲೆ ನನ್ನ ಹೆಬ್ಬಟ್ಟಿನ ಗುರುತು ಇರುತ್ತದೆ. ಆ ಕಾಲಕ್ಕೆ ತೆಗೆದ

ಪೋಟೋವನ್ನು ನೋಡುತ್ತಿದ್ದು, ಅದನ್ನು ಈಗ ನಿ.ಪಿ.೩ ಎಂದು ಗುರುತಿಸಲಾಯಿತು.

**೧೦)** ಅದೇ ದಿನ ಮಧ್ಯಾಹ್ನ ಪೋಲೀಸರು ಜಾಗೆ ತೋರಿಸು ಎಂದು ಹೇಳಿದ್ದರಿಂದ ನಾನು ಆರೋಪಿತರ ಮನೆಯ ಅಡುಗೆ ಮನೆಯಲ್ಲಿ ರಕ್ತ ಬಿದ್ದ ಜಾಗೆಯನ್ನು ತೋರಿಸಿದ್ದು, ಪೋಲೀಸರು ಹತ್ತಿಯಿಂದ ರಕ್ತವನ್ನು ಸಂಗ್ರಹಿಸಿರುತ್ತಾರೆ. ಅದೇ ಸಮಯಕ್ಕೆ ಬಳೆ ಚೂರುಗಳನ್ನು ಸಂಗ್ರಹಿಸಿರುತ್ತಾರೆ. ಪಡಸಾಲೆಯಲ್ಲಿ ಬಿದ್ದಿದ್ದ ರಕ್ತ ಹತ್ತಿದ ಕೌದಿ ಮತ್ತು ತಲೆದಿಂಬನ್ನು ಜಪ್ತಿಮಾಡಿಕೊಂಡಿರುತ್ತಾರೆ. ನಾನು ಈಗ ಗುನ್ಹೆ ಜಾಗೆ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗ ನಿ.ಪಿ.೪ ಎಂದು ಗುರುತಿಸಲಾಯಿತು. ಅದರ ಮೇಲೆ ನನ್ನ ಹೆಬ್ಬಟ್ಟಿನ ಗುರುತು ಇರುತ್ತದೆ. ಆ ಕಾಲಕ್ಕೆ ತೆಗೆದ ಪೋಟೋವನ್ನು ನೋಡುತ್ತಿದ್ದು, ಅದನ್ನು ಈಗ ನಿ.ಪಿ.೫ ಎಂದು ಗುರುತಿಸಲಾಯಿತು.

**೧೧)** ಆ ಕಾಲಕ್ಕೆ ಸಂಗ್ರಹಿಸಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಒಂದು ರಕ್ತ ಹತ್ತಿದ ಕೌದಿ, ರಕ್ತ ಹತ್ತಿದ ತಲೆದಿಂಬು, ಬಳೆಚೂರು, ಅಡುಗೆ ಮನೆಯಲ್ಲಿ ಸಂಗ್ರಹಿಸಿದ ರಕ್ತ ಹತ್ತಿದ ಹತ್ತಿ, ಪಡಸಾಲೆಯಲ್ಲಿ ಸಂಗ್ರಹಿಸಿದ ರಕ್ತ ಹತ್ತಿದ ಹತ್ತಿ ಮತ್ತು ಪಡಸಾಲೆಯಲ್ಲಿ ಸಂಗ್ರಹಿಸಿದ ರಕ್ತ ಹತ್ತಲಾರದ ಮಾದರಿ ಹತ್ತಿ ಇವುಗಳನ್ನು ಎಫ್.ಎಸ್.ಎಲ್. ಸೀಲ್ ಒಡೆದು ಸಾಕ್ಷಿಗೆ

**ಎಸ್.ಸಿ.ನಂಃ** ೭೧/೨೦೨೪
**ಸಿಡಬ್ಲೂಃ** ೦೧
**ಪಿಡಬ್ಲೂಃ** ೦೧

ತೋರಿಸಲಾಯಿತು. ಅವುಗಳನ್ನು ಕ್ರಮವಾಗಿ ಮು.ಮಾ.೧ ರಿಂದ ೬ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಕೆ.ಕೆ., ವಕೀಲರಿಂದ ಆರೋಪಿತರ ಪರವಾಗಿಃ**

ಆರೋಪಿತರ ಪರ ವಕೀಲರು ಕಲಂ **೨೫೪(೩)** ಬಿ.ಎನ್.ಎಸ್.ಎಸ್. ಅಡಿಯಲ್ಲಿ ಅರ್ಜಿ ಹಾಕಿಕೊಂಡು ಪಾಟಿಸವಾಲಿಗೆ ಸಮಯ ಕೋರಿರುತ್ತಾರೆ. ಕಾರಣ ಪಾಟಿ ಸವಾಲಿಗಾಗಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೇ. ಸರಿ ಅದೆ.**

೪ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.